# ‘ಹಾದಿ ಒಳಗಲ ಜ್ಯೋತಿ ಬೀದಿ ಒಳಗಲ ಜ್ಯೋತಿ’

ಕನ್ನಡದ ಅನುಭಾವಿ ಪರಂಪರೆಯ ಉತ್ಕೃಷ್ಟ ಫಲವೇ ತತ್ತ್ವಪದಕಾರರು. ವಚನಗಳಂತೆ ತತ್ತ್ವಪದಗಳೂ ಕೂಡ ಬಹುಕೇಂದ್ರ್ರಗಳ ಸಮತೋಲನದ ಜಗತ್ತಿಗಾಗಿ ಹಂಬಲಿಸುವ ಗುಣವುಳ್ಳವು. ಈ ತತ್ತ್ವಸಾಧಕರು ಕರ್ನಾಟಕದ ಎಲ್ಲ ಸಂಸ್ಕೃತಿಗಳಲ್ಲೂ ಬೆರೆತುಹೋಗಿದ್ದಾರೆ. ಬಹುಸಂಸ್ಕೃತಿಗಳ ಜಗತ್ತು ಉಸಿರಾಡುವ ಸಮಾಜದ ನಡುವೆಯೇ ತತ್ತ್ವಪದಗಳ ಬೆಳಕು ಹರಡಿಕೊಂಡಿರುವುದು. ಜಾತಿ–ಧರ್ಮ–ಪಂಥ ಮತ್ತು ವಿಧಿ–ನಿಷೇಧಗಳ ಸೋಂಕಿಲ್ಲದ, ‘ಕುಲದೊಳಗೆ ಹುಟ್ಟಿ ಕುಲವ ಬೆರಸದ ಆಶಾಪಾಶವಿರಹಿತರು’ ತತ್ತ್ವಪದಕಾರರು. ಇವರು ಮತ–ಪಂಥಗಳಾಚೆಯ ಸಂತರು.

ತತ್ತ್ವಪದಗಳು ಮಾರ್ಗಪರಂಪರೆಯ ದಟ್ಟ ಪ್ರಭಾವ ಮತ್ತು ಯಜಮಾನ ಸಂಸ್ಕೃತಿಯ ದ್ವೈತಾದ್ವೈತ, ಕರ್ಮ ಸಿದ್ಧಾಂತ, ಸ್ವರ್ಗ, ನರಕ, ಸಾವಿನ ನಂತರ ದೊರೆಯುವ ‘ಮೋಕ್ಷ’ ಮುಂತಾದ ಅವಾಸ್ತವದ ಪಾಶಗಳ ಆಲಿಂಗನದಿಂದ ಬಿಡುಗಡೆ ಪಡೆದವರು. ಭಾರತದ ದೇಸಿ ಪರಂಪರೆಗಳ ಸ್ವಭಾವದಲ್ಲೆ ಇರುವ ಬಹುರೂಪತೆ, ಸ್ಥಳೀಯತೆ ಹಾಗೂ ದ್ವಂದ್ವಗಳಿಲ್ಲದ ಧಾರ್ಮಿಕ ನಡೆಯನ್ನು ತತ್ತ್ವಪದಗಳು ಉಜ್ವಲವಾಗಿ ತೋರಿಸಿವೆ.

ಭಾರತದ ಶ್ರೇಣೀಕೃತ ಜಾತಿವ್ಯವಸ್ಥೆಯಲ್ಲಿ ಕೆಳ ಸಮುದಾಯಗಳಿಗೆ ಆಧ್ಯಾತ್ಮಿಕ ಸಮಾನತೆಯನ್ನು ನಿರಾಕರಿಸಿದ ಹಾಗೆಯೇ ಅವರನ್ನು ಶಿಕ್ಷಣದಿಂದಲೂ ವಂಚಿತರನ್ನಾಗಿ ಮಾಡಿ, ತಬ್ಬಲಿ ಜಾತಿಗಳನ್ನು ಸಾಮಾಜಿಕ ಮತ್ತು ಆರ್ಥಿಕವಾಗಿ ದಮನ ಮಾಡಿ ಏಕಾಂಗಿಗೊಳಿಸಿವೆ. ಇಂತಹ ಸಾಮಾಜಿಕ ಕಾರಣಗಳಿಗಾಗಿಯೇ ಎಲ್ಲ ಬಗೆಯ ಅವಕಾಶಗಳಿಂದ ವಂಚಿತರಾದ ಸಮುದಾಯಗಳು ತಮ್ಮ ತಾಯ್ನುಡಿಗಳಲ್ಲಿ ಆಧ್ಯಾತ್ಮಿಕ ಸಾಧನೆಗಳನ್ನು ಕಂಡುಕೊಂಡು ಉನ್ನತವಾದ ಆದರ್ಶಗಳನ್ನು ತಮ್ಮ ನಡೆನುಡಿಗಳಲ್ಲಿ ಒಂದಾಗಿಸಿಕೊಂಡರು. ವೇದ, ಶಾಸ್ತ್ರ, ಪುರಾಣ, ಜಪ–ಯಜ್ಞ, ಹೋಮ, ಹೀಗೆ ತಮ್ಮದಲ್ಲದ ಎಲ್ಲವನ್ನು ಪ್ರಜ್ಞಾಪೂರ್ವಕವಾಗಿ ದೂರವಿರಿಸಿ ‘ಅರಿವು’ ಬೆರೆತ ಯೋಗಿಗಳಾದರು. ತತ್ತ್ವಪದಗಳು ಸೂಫಿ, ಸಿದ್ಧ ಪರಂಪರೆ, ವಚನಕಾರರು ಮುಂತಾದ ಶ್ರಮಣಧಾರೆಯ ಪರಂಪರೆಗಳಿಂದ ಸತ್ವವನ್ನು ಪಡೆದುಕೊಂಡು ಇಂದಿಗೂ ಉಳಿದುಕೊಂಡು ಬಂದಿರುವುದು ಬಹುಪಾಲು ಕೆಳಜಾತಿ ಮತ್ತು ಅಸ್ಪೃಶ್ಯರ ಸಮುದಾಯಗಳಲ್ಲಿ.

ತತ್ತ್ವಸಾಧಕರು ಮೂಲತಃ ಬಹುತ್ವದ ಪರವಾಗಿರುವವರು. ಆದ್ದರಿಂದಲೇ ತತ್ತ್ವಪದಗಳು ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿರುವ ಎಲ್ಲ ಕೆಳಜಾತಿಗಳ ಲೋಕದೃಷ್ಟಿಯ ಭಾಷಿಕ ರೂಪಗಳಾಗಿವೆ. ಜನತೆಯ ನಡುವೆ ಬಾಳಿ ಬದುಕಿ, ಸಂಸಾರ ಮತ್ತು ಸಮಾಜವನ್ನು ಮಿಥ್ಯೆಯೆಂದು ನಿರಾಕರಿಸದೆ ಅವುಗಳ ನಡುವೆಯೇ ‘ಇದ್ದರಿರಬೇಕು ಸಂಸಾರ ಸುಖದಲ್ಹೀಗೆ, ಪದ್ಮಪತ್ರವು ಜಲದೊಳಗಿದ್ದಾಹಂಗೆ’ ಎಂದು ಹೇಳಿದವರು ತತ್ತ್ವಸಾಧಕರು. ‘ಈ ಸಂಸಾರ ಕಾಡಿಗೆಯ ಕೋಣೆಯಂತೆ, ಅದರಲ್ಲಿದ್ದು, ಕಪ್ಪು ಹಚ್ಚಿಕೊಳ್ಳದೇ ಹೊರಬೀಳುವ ದಾಸನಿಗೆ ಶರಣು’ ಎಂದು ಇಂತಹ ಸಂತರನ್ನು ಕುರಿತೇ ಕಬೀರ ಹೇಳಿದ್ದಾನೆ.

ತತ್ತ್ವ ಸಾಧಕರದು ಲೋಕೋತ್ತರವಾದ ಪ್ರೇಮ. ಕ್ರೋಧ, ಆಸೆಬುರುಕುತನ, ಜಾತಿ, ವರ್ಣ, ಮಡಿ–ಮೈಲಿಗೆ ಮತ್ತು ಮೇಲು–ಕೀಳನ್ನು ಸಾರ್ವಜನಿಕವಾಗಿ ಆಚರಿಸುವವರು ಹಾಗೂ ತನ್ನ ದೇಹಕ್ಕಾಗಿ ಬೇಡುವವರು ಎಂದೂ ಯೋಗಿಯಾಗಲಾರರು ಎಂಬ ಪಾಠವನ್ನು ತಿಳಿಸಿದ್ದಾರೆ. ಅವರೇ ಹೇಳುವಂತೆ ‘ನಾವು ಮನಸ್ಸಿನಿಂದ ಯೋಗಿಗಳು, ಉಳಿದವರು ತನುವಿನಿಂದ ಯೋಗಿಗಳು’. ಬಂಧನವಿಲ್ಲದ ಸಹಜ ಜೀವನ, ದಯೆ, ಕಾರುಣ್ಯ, ಔದಾರ್ಯ ಮತ್ತು ಆಶಾಪಾಶಗಳ ನಿಗ್ರಹ – ಇವುಗಳ ಅಸ್ತಿವಾರದ ಮೇಲೆ ತತ್ತ್ವಪದಗಳು ನಿಂತಿವೆ. ಆದ್ದರಿಂದಲೇ ಇವುಗಳನ್ನು ಮಂಗಳಕರ ತತ್ತ್ವಗಳೆಂದು ಕರೆಯುವುದು.

ದೇಶಭಾಷೆಗಳಲ್ಲಿ ಉದಯವಾದ ಜ್ಞಾನ ಧಾರೆಗಳು; ಶಿಷ್ಟ ಸಮಾಜದ ಆಧ್ಯಾತ್ಮಿಕ ಮಹಾಪ್ರವಾಹದೆದುರು ಈಸಿದವು. ದೊಡ್ಡ ಪ್ರತಿಮೆಗಳೆದುರು ಅವರೆಂದೂ ಶರಣಾಗಲಿಲ್ಲ. ಪ್ರಕೃತಿಯ ಗುಣವನ್ನು ಮೈಗೂಡಿಸಿಕೊಂಡಿರುವ ಈ ಜ್ಞಾನ ಪರಂಪರೆಗಳು, ಈಗಲೂ ನಮ್ಮ ನಡುವೆ ಗುಪ್ತವಾಗಿ ಅಂತರ್ಜಲದಂತೆ ಹರಿಯುತ್ತಿವೆ. ಈ ಜ್ಞಾನಧಾರೆ ಹೊರಗೂ ಮೃದು ಒಳಗೂ ಮೃದು. ಲೋಕಹಿತವೆ ತಮ್ಮ ಹಿತವೆಂದು ತಿಳಿದ ಉದಾತ್ತ ತತ್ತ್ವಗಳಿವು. ಈ ತತ್ತ್ವಪದಗಳ ಹುಟ್ಟು ಗುರುಕುಲದಲ್ಲಾಗಿಲ್ಲ. ಇವು ಅಕ್ಷರದ ವಿದ್ಯೆ ತಿಳಿಯದ, ತಮ್ಮ ತಮ್ಮ ಕಸುಬುಗಳನ್ನೇ ಜ್ಞಾನವನ್ನಾಗಿಸಿಕೊಂಡ ಜನಸಾಮಾನ್ಯರಿಂದ ಹುಟ್ಟುಪಡೆದವು. ‘ಹಾದಿ ಒಳಗಲ ಜ್ಯೋತಿ, ಬೀದಿ ಒಳಗಲ ಜ್ಯೋತಿ’ಗಳಾಗಿ ಇಂದಿಗೂ ನಮ್ಮ ನಡುವೆ ಉಳಿದಿವೆ. ಇವುಗಳು ಬೆಳಗುವ ಜ್ಯೋತಿಯನ್ನು ನೋಡಲು ಸ್ವಚ್ಛ ಕಣ್ಣುಗಳು ಮತ್ತು ಮನೋಲಯ ಬೇಕಷ್ಟೆ!

ತತ್ತ್ವಸಾಧಕರ ಪರಂಪರೆಯು ಕರ್ನಾಟಕದಲ್ಲಿ ತಮ್ಮ ಸಾಧನೆಯ ಕೇಂದ್ರಗಳನ್ನಾಗಿ ಸೂಫಿ ಮತ್ತು ಗುರುವಿನ ಗದ್ದುಗೆಗಳನ್ನೇ ಆಶ್ರಯಿಸಿವೆ. ತತ್ತ್ವಸಾಧಕರಿಗೆ ಗುರುವೇ ತಮ್ಮೆಲ್ಲ ಸಾಧನೆಗೆ ಮೂಲ. ಗುರುಮುಖದಿಂದಲ್ಲದೆ ಜ್ಞಾನ ಮೈದೋರದು ಎಂಬ ನಿಲುವು ಇವರದು. ಇದನ್ನೇ ‘ಗುರುವಿನ ಕರುಣದಿಂದ ಅರಿವಿನೊಳಗೆ ಅರಿವಾಯ್ತು’ ಎಂದು ಒಬ್ಬ ತತ್ತ್ವಪದಕಾರ ಹೇಳಿದ್ದಾನೆ. ಸೂಫಿ ಪಂಥದಲ್ಲಿರುವಂತೆ ತತ್ತ್ವ ಪದಕಾರರ ಪರಂಪರೆಯಲ್ಲೂ ಗುರುವಿಗಿಂತ ಶ್ರೇಷ್ಠರು ಯಾರೂ ಇಲ್ಲ. ‘ನಾನು ಇದ್ದಾಗ ಗುರು ಇರಲಿಲ್ಲ, ಈಗ ಗುರುವಿದ್ದಾನೆ ನಾನಿಲ್ಲ’ ಎಂದು ಹೇಳುವುದೇ ತತ್ತ್ವಸಾಧಕರ ಮಾರ್ಗದ ವೈಶಿಷ್ಟ್ಯ.

ತತ್ತ್ವಸಾಧಕರು ಜಾತಿ ಸಂಬಂಧದ ತರತಮಭಾವಗಳ ವಿರುದ್ಧ ‘ಆತ್ಮ ಯಾವಕುಲ ಜೀವ ಯಾವ ಕುಲ?’ ಎಂದು ಪ್ರಶ್ನಿಸಿದ್ದಾರೆ. ಸ್ಥಾವರಗೊಂಡ ದೇವಾಲಯಗಳ ನಿರಾಕರಿಸುವುದರ ಮೂಲಕ ದೇಹ ಮತ್ತು ಕಾಯಕವನ್ನೇ ದೈವೀಕರಣಗೊಳಿಸಿದ ತತ್ತ್ವಪದಗಳ ಸಾಂಗತ್ಯವು ಮನಸ್ಸಿನ ಮತ್ತು ಸಮಾಜದ ಮಲಿನತೆಯನ್ನು ಏಕಕಾಲದಲ್ಲಿ ಸ್ವಚ್ಛಗೊಳಿಸುತ್ತದೆ. ಮಧ್ಯಕಾಲಿನ ಸಾಹಿತ್ಯಧಾರೆಯಲ್ಲಿ ತತ್ತ್ವಪದಕಾರರ ಉದಯ, ಕನ್ನಡದ ದೇಸಿಯುಗದ ಉಚ್ಛ್ರಾಯಕಾಲ.

ತತ್ತ್ವಪದಗಳ ಜಗತ್ತಿಗೆ ಪ್ರವೇಶಿಸುವುದೆಂದರೆ, ಸಹಿಷ್ಣುತೆ ಹಾಗೂ ಸಾಮರಸ್ಯದ ಜಗತ್ತಿಗೆ ಬಂದಂತೆ. ತತ್ತ್ವಪದವೊಂದರ ‘ಯಾವ ದೇಶದ ಹೂವಿದ್ದಾವ ಇವು!’ ಎನ್ನುವ ರೂಪಕ, ತತ್ತ್ವಪದಗಳ ಮನೋಲೋಕವನ್ನು ಸಮರ್ಥವಾಗಿ ಪ್ರತಿನಿಧಿಸುತ್ತದೆ.

■ **ಜೆ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಜನರಿಗೆ ಹಿರಿಯರಿಂದ ಬರುವ ಆಸ್ತಿಯಲ್ಲಿ ಭಾಷೆಯೂ ಒಂದು. ಅದು ಚೆನ್ನಾಗಿದ್ದಷ್ಟೂ ಭೂಷಣ.
  –ಬಿಎಂಶ್ರೀ
- ಧೈರ್ಯ ಎನ್ನುವುದು ನಿಮ್ಮೊಳಗಿದ್ದರೆ ಅದೇ ನಿಮ್ಮ ವ್ಯಕ್ತಿತ್ವದ ದೊಡ್ಡ ಆಸ್ತಿ.
  –ಬಾಲಗಂಗಾಧರ ತಿಲಕ್
- ಶಿಕ್ಷಣ ಜೀವನಕ್ಕಾಗಿ ನಡೆಸುವ ಸಿದ್ಧತೆ ಅಲ್ಲ, ಶಿಕ್ಷಣವೇ ಜೀವನ.
  –ಜಾನ್ ಡೆವೀ
- ಸೋಗುಹಾಕದೆ ಸಹಜವಾಗಿ ಇರುವುದರಲ್ಲಿಯೇ ಸೌಂದರ್ಯವಿದೆ.
  –ಜಿಡ್ಡು ಕೃಷ್ಣಮೂರ್ತಿ
- ಮುನಿದಂಗೆ ಮುನಿಯದಿರು, ಕಿನಿವಂಗೆ ಕಿನಿಯದಿರು/ ಮನಸಿಜಾರಿಯನು ಮರೆಯದಿರು, ಶಿವಕೃಪೆಯು/ ಘನಕೆ ಘನವಕ್ಕು.
  –ಸರ್ವಜ್ಞ
- ಜನ, ಹಣ ಮತ್ತು ವಸ್ತುಗಳು ಸ್ವತಃ ಜಯ ಅಥವಾ ಸ್ವಾತಂತ್ರ್ಯವನ್ನು ತಂದುಕೊಡಲು ಸಾಧ್ಯವಿಲ್ಲ. ಧೈರ್ಯಶಾಲಿ ಕೆಲಸಗಳನ್ನು ಮತ್ತು ಉಜ್ವಲ ಸಾಧನೆಯನ್ನು ಮಾಡಬೇಕಾದರೆ ನಮ್ಮಲ್ಲಿ ನಾವು ಪ್ರೇರಕ ಶಕ್ತಿಯನ್ನು ಹೊಂದಿರಬೇಕು.
  –ಸುಭಾಷ್‌ಚಂದ್ರ ಬೋಸ್
- ಓದು, ಓದು, ಓದು. ಏಕೆಂದರೆ ಶತ್ರುಗಳು ನಿನ್ನ ಜ್ಞಾನಕ್ಕೆ ಮಾತ್ರ ಹೆದರುತ್ತಾರೆ.
  –ಬಿ.ಆರ್. ಅಂಬೇಡ್ಕರ್